**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 13.08.2021.**

**1] ಎಪಿಎಮ್‌ಸಿ ಪೊಲೀಸ ಠಾಣೆ ಗುನ್ನೆ ನಂ: 76/2021 ಕಲಂ: 78(3) ಕೆ.ಪಿ ಆ್ಯಕ್ಟ್.**

ದಿನಾಂಕ: 12.08.2021 ರಂದು 16.15 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಮೈಬೂಬ ಹುಸೇನಸಾಬ ಕೋಲಾರ, ಸಾ॥ ಮುಜಾವರ ಗಾರ್ಡನ್ ಬಬಲೇಶ್ವರ ನಾಕಾ ಹತ್ತಿರ ವಿಜಯಪುರ. 2) ಇಸ್ಮಾಯಿಲ್ ಮಹಮ್ಮದ್‌ಗೌಸ್ ಹವಾಲ್ದಾರ, ಸಾ॥ ಗಾಂಧಿನಗರ ವಿಜಯಪುರ 3) ಅಬ್ದುಲ್‌ಸತಾರ್ ಇಬ್ರಾಹಿಂಸಾಬ ಜುನೇದಿ, ಸಾ॥ ಗ್ಯಾಂಗಬಾವಡಿ ವಿಜಯಪುರ.(ಪರಾರಿ) ಇವರು ವಿಜಯಪುರ ಶಹರದ ಶಾಪೇಟಿಯ ಮಹಾದೇವಪ್ಪನ ಗುಡಿಯ ಮುಂದೆ ರಸ್ತೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ. ಸಾರ್ವಜನಿಕರಿಗೆ ಕೂಗಿ ಕರೆದು ಅವರಿಂದ ಒಂದು ರೂಗೆ 80 ರೂ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕಲ್ಯಾಣ ಮಟಕಾ ಅಂಬುವ ಓಸಿ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ರೋಖ ಹಣ: 600/- ರೂಗಳು ಈ ಬಗ್ಗೆ ಸ॥ತ॥ ಸೋಮೇಶ ಗೆಜ್ಜಿ. ಪಿ.ಎಸ್.ಐ(ಕಾ&ಸು) ಎ.ಪಿ.ಎಂ.ಸಿ ಪೊಲೀಸ್ ಠಾಣೆ ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 12.08.2021 ರಂದು ಎಪಿಎಮ್‌ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಗಾಂಧಿಚೌಕ ಪೊಲೀಸ ಠಾಣೆ ಗುನ್ನಾ. ನಂ: 167/2021 ಕಲಂ: 272, 273 ಐಪಿಸಿ ಮತ್ತು ಕಲಂ: 20(2), 24 ಕೊಟಪಾ ಆ್ಯಕ್ಟ್-2003**

ದಿನಾಂಕ 12.08.2021 ರಂದು 17.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಚಾಂದಪಾಷಾ ಹಾಜಿಲಾಲ ಪಟೇಲ್, ಸಾ॥ ಸಕಾಪರೋಜಾ, ವಿಜಯಪುರ. ಇವರು ವಿಜಯಪುರ ಶಹರದ ನವಬಾಗ ಹೊಸ ರೋಡ್‌ನಲ್ಲಿರುವ ಸ್ಟಾರ್ ಪಾನ್‌ಶಾಪ್‌ನಲ್ಲಿ ಮನುಷ್ಯರು ಉಪಯೋಗಿಸಲು ಅರ್ಹವಲ್ಲದ ಆರೋಗ್ಯಕ್ಕೆ ಹಾನಿಕಾರಕ ಪದಾರ್ಥಗಳನ್ನು ಒಳಗೊಂಡ ವಸ್ತುಗಳನ್ನು ಉಪಯೋಗಿಸಿ ಮಂಪರು ಬರಿಸುವ ಹಾಗೂ ಆರೋಗ್ಯಕ್ಕೆ ಹಾನಿಯಾಗುವ ಮಾವಾ ವಸ್ತುವನ್ನು ಇಟ್ಟು ಮಾರಾಟ ಮಾಡುತ್ತಿದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಶರಣಗೌಡ ಬಿ ಗೌಡರ ಪಿಎಸ್‌ಐ (ಕಾ&ಸು) ಗಾಂಧಿಚೌಕ ಪೊಲೀಸ್ ಠಾಣೆ, ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 12.08,2021 ರಂದು ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಝಳಕಿ ಪೊಲೀಸ ಠಾಣೆ ಗುನ್ನಾ ನಂ: 76/2021 ಕಲಂ: 15(ಎ).32(3) ಕೆಇ ಆ್ಯಕ್ಟ್**

ದಿನಾಂಕ 12.08.2021 ರಂದು 15.15 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮಡೆಪ್ಪ ಸಿದ್ದಪ್ಪ ಚೋರಗಿ ಸಾ: ಧೂಳಖೇಡ ತಾ: ಚಡಚಣ ಈತನು ತನ್ನ ಬಾಬತ್ತ ಇರುವ ಚಡಚಣ ತಾಲೂಕಿನ ಧೂಳಖೇಡ ಗ್ರಾಮದ ಆರೋಪಿತನು ತನ್ನ ಬಾಬತ್ತ ಇರುವ ಹೋಟಲದಲ್ಲಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ನೀರು ಗ್ಲಾಸು ಕೊಟ್ಟು ಕುಡಿಯಲು ಅವಕಾಶ ಮಾಡಿ ಕೊಟ್ಟಿರುವ ಬಗ್ಗೆ ತಾನು ಸರಕಾರದಿಂದ ಯಾವುದೇ ಅನುಮತಿ ವ ಲೈಸನ್ಸ್‌ನ್ನು ಪಡೆಯದೆ ಸಾರ್ವಜನಿಕ ಸ್ಥಳದಲ್ಲಿ ತನ್ನ ಪಾಯ್ದೇಗೋಸ್ಕರ್ ತನ್ನ ಹತ್ತಿರ 180 ಎಂ.ಎಲ್. ಅಳತೆಯ ಓಲ್ಡ್ ಟವರಿನ್ ಕಂಪನಿಯ ಸರಾಯಿ ಪೌಚು 01 ಶೀಲು ಒಡೆದಿದ್ದು, ಇದರಲ್ಲಿ ಅರ್ದಾದಷ್ಟು ಸರಾಯಿ ಇದ್ದದ್ದು ಅ.ಸ.ಕಿ: 00.00 ರೂ. ಮತ್ತು 2] 03 ಪ್ಲಾಸ್ಟಿಕ ಗ್ಲಾಸುಗಳು ಅಸಕಿ: 00-00 ಇವುಗಳನ್ನು ಅಂಗಡಿ ಖೋಲಿಯಲ್ಲಿ ಇಟ್ಟು ಸರಾಯಿ ಕುಡಿಯಲು ಬಂದವರಿಗೆ ನೀರು ಗ್ಲಾಸುಗಳು ಕೊಟ್ಟು ಸಹಕರಿಸುತ್ತಿರುವಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಪಿ.ಎನ್. ಮನಗೂಳಿ ಪಿ.ಎಸ್.ಐ ಝಳಕಿ ಪೊಲೀಸ್ ಠಾಣೆ .ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 12.08.2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.